# SEPTEMBER 18, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಕಲಬುರಗಿಯನ್ನು ‘ಸಕ್ಷಮ ನಗರಿ’ಯಾಗಿ** ರೂಪಿಸಲು, ವಿಶೇಷ ಯೋಜನೆ – ಮುಖ್ಯಮಂತ್ರಿ ಸಿದ್ದರಾಮಯ್ಯ.
- **ಬೀದರ್ ಜಿಲ್ಲೆಯ, ಅಶೋತ್ತರ ತಾಲೂಕು** ಹುಮ್ನಾಬಾದ್‌ನಲ್ಲಿ, ಅಂತಿಮ ಘಟ್ಟಕ್ಕೆ ಸಂಪೂರ್ಣತಾ ಅಭಿಯಾನ.
- **‘ಸ್ವಚ್ಛತೆಯೇ ಸೇವೆ’**; ರಾಜ್ಯಾದ್ಯಂತ ಸ್ವಚ್ಛತಾ ಪಾಕ್ಷಿಕ್ಕೆ ಚಾಲನೆ, ಸ್ವಭಾವ ಹಾಗೂ ಸಂಸ್ಕಾರ ಸ್ವಚ್ಛತೆಗೆ ಒತ್ತು.
- **ಮಲೆನಾಡಿಗೆ ಪರಿಸರ ಸ್ನೇಹಿ ಇಂಧನ** ನೀತಿ ರೂಪಿಸಲು, ಆದ್ಯತೆ ನೀಡಬೇಕು – ರಾಷ್ಟ್ರೀಯ ಜೈವಿಕ ಇಂಧನ ತಜ್ಞ, ವೈ.ಬಿ.ರಾಮಕೃಷ್ಣ ಮನವಿ.

<><><>

**ಈಗ ವಾರ್ತೆಗಳ ವಿವರ**

<><><>

**ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ,** ಕಲಬುರಗಿಯಲ್ಲಿ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ, ಕಲ್ಯಾಣ ಕರ್ನಾಟಕ ಭಾಗದ 46 ವಿ ‘ಯಗಳಿಗೆ ಒಟ್ಟು 11 ಸಾವಿರದ 770 ಕೋಟಿ ರೂಪಾಯಿ ಯೋಜನೆಗಳಿಗೆ, ಅನುಮೋದನೆ ನೀಡಲಾಗಿದೆ. ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ, ಪ್ರತ್ಯೇಕ ಸಚಿವಾಲಯ ಸ್ಥಾಪನೆ, 685 ಕೋಟಿ ರೂಪಾಯಿ ವೆಚ್ಚದಲ್ಲಿ, ಕಲಬುರಗಿ ನಗರವನ್ನು, ಸಕಲ ಸೌಲಭ್ಯಗಳುಳ್ಳ ಸಕ್ಷಮ ನಗರಿಯಾಗಿ ಪರಿವರ್ತನೆ, ಬೀದರ್ ಮತ್ತು ರಾಯಚೂರು ಪಟ್ಟಣಗಳನ್ನು ನಗರ ಪಾಲಿಕೆಯಾಗಿ ರೂಪಿಸುವ, ಬೀದರ್ ಮತ್ತು ಕಲಬುರಗಿ ವ್ಯಾಪ್ತಿಯ ಹಳ್ಳಿಗಳಿಗೆ, ಕುಡಿಯುವ ನೀರು ಒದಗಿಸುವ 7 ಸಾವಿರದ 200 ಕೋಟಿ ರೂಪಾಯಿ ಯೋಜನೆಗೆ, ಸಚಿವ ಸಂಪುಟ ಅನುಮತಿಸಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆಯ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

<><><>

**ನಾರಾಯಣಪುರ ಜಲಾಶಯದಿಂದ** ನೀರು ತರುವ ಯೋಜನೆಗೆ, ಕೇಂದ್ರ ಸರ್ಕಾರದ ಸಹಭಾಗಿತ್ವವಿದೆ. 7 ಸಾವಿರದ 200 ಕೋಟಿ ರೂಪಾಯಿಗಳಲ್ಲಿ, ಯೋಜನೆಯ ಅರ್ಧ ಅನುದಾನವನ್ನು, ಕೇಂದ್ರ ನೀಡಬೇಕಿದೆ ಎಂದರು.

<><><>

**ಕಲ್ಯಾಣ ಕರ್ನಾಟಕ ಭಾಗದಲ್ಲಿ** ಖಾಲಿಯಿರುವ, 17 ಸಾವಿರದ 439 ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲು, ತೀರ್ಮಾನಿಸಿರುವುದಾಗಿ ಮುಖ್ಯಮಂತ್ರಿಯವರು ಹೇಳಿದರು.

<><><>

**ಕಲ್ಯಾಣ ಕರ್ನಾಟಕ ಉತ್ಸವದ** ಅಂಗವಾಗಿ, ಯಾದಗಿರಿ ನಗರ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ, ರಾಷ್ಟ್ರ ಧ್ವಜಾರೋಹಣವನ್ನು, ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ನೆರವೇರಿಸಿದರು.

<><><>

**ರಾಯಚೂರು ಜಿಲ್ಲಾ ಕ್ರೀಡಾಂಗಣದಲ್ಲಿ,** ಜಿಲ್ಲಾ ಉಸ್ತುವಾರಿ ಸಚಿವ ಶರಣ್‌ಪ್ರಕಾಶ್ ಪಾಟೀಲ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ, ಗೌರವ ವಂದನೆ ಸ್ವೀಕರಿಸಿದರು.

<><><>

**ಹೈದರಾಬಾದ್ ಕರ್ನಾಟಕ ವಿಮೋಚನಾ ದಿನದ ಅಂಗವಾಗಿ,** ಕೊಪ್ಪಳದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ ರಾಷ್ಟ್ರ ಧ್ವಜಾರೋಹಣ ನೇರವೇರಿಸಿ, ಗೌರವ ವಂದನೆ ಸ್ವೀಕರಿಸಿದರು.

<><><>

**ಕೇಂದ್ರ ಸರ್ಕಾರದ ನೀತಿ ಆಯೋಗ ಸಂಚಾಲಿತ,** ಸಂಪೂರ್ಣತಾ ಅಭಿಯಾನ, ಮಹತ್ವಾಕಾಂಕ್ಷಿ ಬೀದರ್ ಜಿಲ್ಲೆಯ, ಆಶೋತ್ತರ ತಾಲೂಕು ಹುಮ್ನಾಬಾದ್‌ನಲ್ಲಿ ಪ್ರಗತಿಯಲ್ಲಿದೆ. ಆರು ಸೂಚ್ಯಂಕಗಳ ಮಾನದಂಡದ ಆಧಾರದ ಮೇಲೆ, ಫಲಾನುಭವಿಗಳನ್ನು ನೋಂದಾಯಿಸಿ, ನೂರರಷ್ಟು ಗುರಿ ಸಾಧಿಸಲು, ತಾಲೂಕು ಆಡಳಿತ ಕಳೆದ ೮೮ ದಿನಗಳಿಂದ ಬದ್ಧತೆಯಿಂದ ಪ್ರಯತ್ನಿಸಿದೆ. ಹುಮ್ನಾಬಾದ್ ಸಂಪೂರ್ಣತಾ ಅಭಿಯಾನದ ಫೆಲೋ ನಾಗೇಂದ್ರ ಪ್ರದೇಶ ಸಮಾಚಾರಕ್ಕಾಗ, ಮಾಹಿತಿ ನೀಡಿದ್ದಾರೆ.

<><><>

**ಕಲಬುರಗಿ ಜಿಲ್ಲೆ, ಕಮಲಾಪುರ ತಾಲೂಕಿನಲ್ಲಿ,** ಅತಿವೃಷ್ಟಿಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿದ, ಕಂದಾಯ ಖಾತೆ ಸಚಿವ ಕೃ ್ಣ ಬೈರೇಗೌಡ, ಬೆಳೆ ಹಾನಿ ಪರಿಶೀಲಿಸಿದರು. ಕಮಲಾಪುರ ತಾಲೂಕಿನ ಮಹಾಘನವಿ ಗ್ರಾಮದ, ನಾಡ ಕಚೇರಿಗೆ ಭೇಟಿ ನೀಡಿ, ಜನಸ್ನೇಹಿ ಮತ್ತು ಜನಪರ ಆಡಳಿತಕ್ಕೆ ಒತ್ತು ನೀಡುವಂತೆ, ಅಧಿಕಾರಿಗಳಿಗೆ ನಿರ್ದೇಶಿಸಿದರು.

<><><>

**ಪ್ರಧಾನಮಂತ್ರಿಯವರ ಮಹತ್ವಾಕಾಂಕ್ಷೆಯ,** ಸ್ವಚ್ಛ ಭಾರತ ಅಭಿಯಾನದ ದಶಮಾನೋತ್ಸವದ ಹಿನ್ನೆಲೆ, ನೈರ್ಮಲ್ಯ ಮತ್ತು ಶುಚಿತ್ವ ಕಾಪಾಡಲು, ಪ್ರತಿಯೊಬ್ಬರೂ ಕೈ ಜೋಡಿಸುವಂತೆ, ಪೌರಾಡಳಿತ ಖಾತೆ ಸಚಿವ ರಹೀಂ ಖಾನ್ ಮನವಿ ಮಾಡಿದ್ದಾರೆ. 'ಸ್ವಚ್ಛತೆಯೇ ಸೇವೆ' ಪಾಕ್ಷಿಕ ಕಾರ್ಯಕ್ರಮಕ್ಕೆ, ಬಳ್ಳಾರಿಯಲ್ಲಿ ಚಾಲನೆ ನೀಡಿ, ಅವರು ಮಾತನಾಡಿದರು.

<><><>

**ಪರಿಸರ, ಪ್ರಕೃತಿ ಸ್ವಚ್ಛವಾಗಿದ್ದರೆ** ಮಾತ್ರ, ಜನರು ಆರೋಗ್ಯವಂತರಾಗಿರಲು ಸಾಧ್ಯ, ಎಂದು ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ. ಬೀದರ್ ಕೋಟೆ ಆವರಣದಲ್ಲಿ, ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

<><><>

**ಬಾಗಲಕೋಟೆ ಜಿಲ್ಲೆ, ಐಹೊಳೆಯ ಐತಿಹಾಸಿಕ** ಸ್ಮಾರಕಗಳ ಆವರಣದಲ್ಲಿ, ನಡೆದ 'ಸ್ವಚ್ಛತಾ ಹೀ ಸೇವಾ' ವಿಶೇ ' ಆಂದೋಲನಕ್ಕೆ, ಸಂಸದ ಪಿ.ಸಿ.ಗದ್ದಿಗೌಡರ ಚಾಲನೆ ನೀಡಿದರು.

<><><>

**ನೈರ್ಮಲ್ಯ ಮತ್ತು ಶುಚಿತ್ವ,** ನಮ್ಮ ದೈನಂದಿನ ಜೀವನದ ಭಾಗವಾಗಬೇಕು ಎಂದು, ದಕ್ಷಿಣಕನ್ನಡ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಹೇಳಿದ್ದಾರೆ. ಮಂಗಳೂರಿನ ಬೆಂಗರೆಯಲ್ಲಿ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಶ್ರೀ ವಿಶ್ವಕರ್ಮ ಜಯಂತಿಯನ್ನು,** ನಾಡಿನಾದ್ಯಂತ ಶ್ರದ್ಧಾ, ಭಕ್ತಿಯಿಂದ ಆಚರಿಸಲಾಯಿತು. ಪ್ರಧಾನಮಂತ್ರಿ ನರೇಂದ್ರ ಮೋದಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಅನೇಕ ಗಣ್ಯರು ಶುಭಾಶಯ ಕೋರಿದ್ದಾರೆ.

<><><>

**ಶ್ರೀ ವಿಶ್ವಕರ್ಮ ಜಯಂತ್ಯುತ್ಸವ ನಿಮಿತ್ತ,** ಬೆಳಗಾವಿಯಲ್ಲಿ ಆಯೋಜಿಸಿದ್ದ ಮೆರವಣಿಗೆಗೆ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಚಾಲನೆ ನೀಡಿದರು.

<><><>

**ವಿಶ್ವಕರ್ಮರು ವಿಶ್ವದ ಮೊದಲ ಶಿಲ್ಪಿಗಳು;** ಅವರ ಕ್ರಿಯಾಶೀಲತೆ, ಸೃಜನಶೀಲತೆ ವಿಶೇ ʼವಾದದ್ದು ಎಂದು, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದ್ದಾರೆ. ಧಾರವಾಡದ ಆಲೂರು ವೆಂಕಟರಾವ್ ಭವನದಲ್ಲಿ ಆಯೋಜಿಸಿದ್ದ, ವಿಶ್ವಕರ್ಮ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಮಾತನಾಡಿದರು.

<><><>

**ಸೋಮನಾಥಪುರ ದೇವಾಲಯ ಸೇರಿದಂತೆ,** ದೇಶದ ದೇವಾಲಯಗಳು ಹಾಗೂ ಪ್ರತಿಮೆಗಳ ಕೆತ್ತನೆಯಲ್ಲಿ, ವಿಶ್ವಕರ್ಮ ಸಮಾಜದ ಕೊಡುಗೆ ಅಪಾರ ಎಂದು ಸಾಹಿತಿ ಜೆ.ಸೋಮಣ್ಣ, ಮಡಿಕೇರಿಯ ಗಾಂಧಿ ಭವನದಲ್ಲಿ ಜರುಗಿದ, ವಿಶ್ವಕರ್ಮ ಜಯಂತಿ ಕಾರ್ಯಕ್ರಮದಲ್ಲಿ, ನುಡಿದರು.

<><><>

**ಪ್ರಧಾನಮಂತ್ರಿ ಸೂರ್ಯ ಯೋಜನೆ ಸದುಪಯೋಗವನ್ನು** ಮಲೆನಾಡಿನ ರೈತರು ಪಡೆಯಲು ಅನುವು, ಮಲೆನಾಡು ಪರಿಸರಸ್ನೇಹಿ ಇಂಧನ ನೀತಿ ರೂಪಿಸುವಂತೆ ಹಾಗೂ ಸೋಲಾರ್ ಮಿಷನ್ ರಾಜ್ಯದಲ್ಲಿ ಸ್ಥಾಪಿಸಲು ಆದ್ಯತೆ ನೀಡಬೇಕಿದೆ ಎಂದು, ರಾಷ್ಟ್ರೀಯ ಜೈವಿಕ ಇಂಧನ ತಜ್ಞ ಡಾಕ್ಟರ್ ವೈ.ಬಿ.ರಾಮಕೃಷ್ಣ ಅಭಿಪ್ರಾಯಪಟ್ಟಿದ್ದಾರೆ. ಉತ್ತರಕನ್ನಡ ಜಿಲ್ಲೆಯ ಶಿರಸಿಯಲ್ಲಿ, ಸುಸ್ಥಿರ ಇಂಧನ ಅಭಿವೃದ್ಧಿ ಕಾರ್ಯಾಗಾರದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

<><><>

**ಡಾ. ವೈ.ಬಿ. ರಾಮಕೃಷ್ಣ ಧ್ವನಿ 60 ಸೆಕೆಂದುಗಳು**

<><><>

**ಬಾಲ ಮಂದಿರದ ಮಕ್ಕಳನ್ನು,** ಸಮಾಜದ ಮುಖ್ಯ ವಾಹಿನಿಗೆ ತರಲು, ಧಾರವಾಡದ ಬಾಲ ವಿಕಾಸ ಅಕಾದೆಮಿ, ಬದ್ಧತೆಯಿಂದ ಪ್ರಯತ್ನಿಸಲಿದೆ ಎಂದು, ಅಕಾದೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ ತಿಳಿಸಿದ್ದಾರೆ. ಧಾರವಾಡ ಸಮೀಪ ಹಳ್ಳಿಗೇರಿಯ, ಪರಿಸರ ಪಾಠಶಾಲೆ, ನೇಚರ್ ಫಸ್ಟ್ ಇಕೋ ವಿಲೇಜ್‌ನಲ್ಲಿ ಬಾಲ ಮಂದಿರದ ಮಕ್ಕಳಿಗಾಗಿ ಆಯೋಜಿತ, ರಾಜ್ಯ ಮಟ್ಟದ ಮಕ್ಕಳ ಕಥಾ ಕಮ್ಮಟವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

<><><>

**ಅತಿಥಿಯಾಗಿ ಪಾಲ್ಗೊಂಡಿದ್ದ,** ಪ್ರಾಚಾರ್ಯ ಶಶಿಧರ ತೋಡಕರ ಅವರು ಮಾತನಾಡಿ, ನಿಸರ್ಗದ ಮಡಿಲಲ್ಲಿ ಸೃಜನಶೀಲತೆ ಮತ್ತು ಕರ್ತೃತ್ವಶಕ್ತಿ ಮಕ್ಕಳಲ್ಲಿ ಅರಳುತ್ತದೆ ಎಂದರು.

<><><>

**ಇನ್ನೋರ್ವ ಅತಿಥಿ ಶಂಕರ ಹಲಗತ್ತಿ** ಮಾತನಾಡಿ, ಬಾಲ ಮಂದಿರದ ಮಕ್ಕಳ ಬಾಲ್ಯವನ್ನು ಕಟ್ಟಿಕೊಡುವ, ಅಕಾದೆಮಿಯ ಈ ಪ್ರಯತ್ನ ಮಾದರಿ ಎಂದರು. ಹಳ್ಳಿಗೇರಿ ಗ್ರಾಮ ಪಂಚಾಯ್ತಿ ಅಧ್ಯಕ್ಷ ದ್ಯಾಮಣ್ಣ ಮೆಣಸಿನಕಾಯಿ, ಅಧ್ಯಕ್ಷತೆ ವಹಿಸಿದ್ದರು.

<><><>

**ಪುಸ್ತಕ ಓದದಿದ್ದರೆ, ಕನ್ನಡ ಬೆಳೆಯುವುದಿಲ್ಲ.** ಪುಸ್ತಕ ಖರೀದಿಸಿ ಓದಬೇಕು ಎಂದು ಕಾಂದಬರಿಕಾರ ಎಸ್.ಎಲ್.ಭೈರಪ್ಪ, ಕನ್ನಡಿಗರಿಗೆ ಸಲಹೆ ನೀಡಿದ್ದಾರೆ. ಹುಬ್ಬಳ್ಳಿಯ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಸಭಾಂಗಣದಲ್ಲಿ, ಡಾಕ್ಟರ್ ಕರ್ಕಿ ಸಾಹಿತ್ಯ ವೇದಿಕೆ ಮತ್ತು ಸಾಹಿತ್ಯ ಪ್ರಕಾಶನ ಸಾಹಿತ್ಯ ಭಂಡಾರದ ಮ.ಅನಂತಮೂರ್ತಿ ಅವರ ಪುಣ್ಯತಿಥಿ ಅಂಗವಾಗಿ, ಪ್ರಕಾಶಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪುಸ್ತಕವನ್ನು ಪ್ರಕಟಿಸದಿದ್ದರೆ ಅದು ಕನ್ನಡಕ್ಕೆ ಮಾಡುವ ದ್ರೋಹ ಎಂದು ನಂಬಿದ್ದ, ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾಯರು, ಪುಸ್ತಕ ಪ್ರಕಾಶನ ಸಂಸ್ಥೆಯೊಂದನ್ನು ಆರಂಭಿಸಿ, ಕನ್ನಡದ ಲೇಖಕರಿಗೆ ಆಸರೆಯಾದರು. ದೇವುಡು ನರಸಿಂಹ ಶಾಸ್ತ್ರೀ ಅವರು ಪುಸ್ತಕಗಳನ್ನು ಪ್ರಕಟಿಸಿ, ಸೂಕ್ತ ಗೌರವ ಧನವನ್ನೂ ನೀಡಿ, ಲೇಖಕರ ಅಂತಃಸತ್ವ ಬತ್ತದಂತೆ ನಿಡುಗಾಲ ಕಾಯ್ದರು. ತಾವು ಪರ್ವ ಕಾದಂಬರಿ ಬರೆಯುವಾಗ, ಸಾಹಿತ್ಯ ಭಂಡಾರದ ಗೋವಿಂದರಾಯರು ಆರ್ಥಿಕ ನೆರವು ನೀಡಿದ್ದರು ಎಂದು, ಡಾಕ್ಟರ್ ಭೈರಪ್ಪ ಸ್ಮರಿಸಿದರು.

<><><>

**ಪರಿಸರ ಬರೆಹಗಾರ ಶಿವಾನಂದ ಕಳವೆ** ಮಾತನಾಡಿದ, ಕಥೆಗಳ ಮೂಲಕ ಮಕ್ಕಳಿಗೆ ಪರಿಸರದ ಅರಿವನ್ನು ವಿಸ್ತರಿಸಬಹುದು. ಪುಸ್ತಕಗಳನ್ನು ಓದಲು, ಮಕ್ಕಳನ್ನು ಪ್ರೇರೇಪಿಸಬೇಕು. ನಮ್ಮ ಪರಂಪರೆಯ ಜ್ಞಾನವನ್ನು ಮುಂದಿನ ಪೀಳಿಗೆಗೆ ದಾಟಿಸಬೇಕು ಎಂದರು.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

**ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ,** ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ, ನವೆಂಬರ್ 14 ರಿಂದ 17ರ ವರೆಗೆ "ಹವಾಮಾನ ಚತುರ ಡಿಜಿಟಲ್ ಕೃಷಿ" ಧ್ಯೇಯದೊಂದಿಗೆ, ಕೃಷಿ ಮೇಳ ಜರುಗಲಿದೆ.

<><><>

**ಗದಗ ಜಿಲ್ಲೆಯ** ಚಿಕ್ಕೊಪ್ಪ ಗ್ರಾಮದಲ್ಲಿ 'ಪೋ ಣ ಮಾಸಾಚರಣೆ' ಜರುಗಿತು.

<><><>

**ಕರ್ನಾಟಕ ನಾಮಕರಣ ಸಂಭ್ರಮ 50ರ,** ಕನ್ನಡ ಜ್ಯೋತಿ ರಥಯಾತ್ರೆಯ ಮೆರವಣಿಗೆ ಹಾಸನದಲ್ಲಿ ನಡೆಯಿತು.

<><><>

**'ಹೆಸರಾಯಿತು ಕರ್ನಾಟಕ; ಉಸಿರಾಗಲಿ ಕನ್ನಡ'** ಧ್ಯೇಯದ, ಕನ್ನಡ ಜ್ಯೋತಿ ರಥಯಾತ್ರೆ, 20 ನೇ ತಾರೀಖು, ಚಿಕ್ಕಮಗಳೂರು ಜಿಲ್ಲೆ ಪ್ರವೇಶಿಸಲಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಕಲಬುರಗಿಯನ್ನು 'ಸಕ್ಷಮ ನಗರಿ'ಯಾಗಿ** ರೂಪಿಸಲು, ವಿಶೇಷ ಯೋಜನೆ – ಮುಖ್ಯಮಂತ್ರಿ ಸಿದ್ದರಾಮಯ್ಯ.
- **ಬೀದರ್ ಜಿಲ್ಲೆಯ, ಆಶೋತ್ತರ ತಾಲೂಕು** ಹುಮ್ನಾಬಾದ್‌ನಲ್ಲಿ, ಅಂತಿಮ ಘಟ್ಟಕ್ಕೆ ಸಂಪೂರ್ಣತಾ ಅಭಿಯಾನ.
- **'ಸ್ವಚ್ಛತೆಯೇ ಸೇವೆ'**; ರಾಜ್ಯಾದ್ಯಂತ ಸ್ವಚ್ಛತಾ ಪಾಕ್ಷಿಕ್ಕೆ ಚಾಲನೆ, ಸ್ವಭಾವ ಹಾಗೂ ಸಂಸ್ಕಾರ ಸ್ವಚ್ಛತೆಗೆ ಒತ್ತು.
- **ಮಲೆನಾಡಿಗೆ ಪರಿಸರ ಸ್ನೇಹಿ ಇಂಧನ ನೀತಿ** ರೂಪಿಸಲು, ಆದ್ಯತೆ ನೀಡಬೇಕು – ರಾಷ್ಟ್ರೀಯ ಜೈವಿಕ ಇಂಧನ ತಜ್ಞ, ವೈ.ಬಿ.ರಾಮಕೃಷ್ಣ, ಮನವಿ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>

**ಹರ್ಷ**